**ಅಸಲು ದಾವಾ ನಂಃ79/2017**
**ಡಿ.ಡಬ್ಲ್ಯೂಃ 01**

**ದಿನಾಂಕಃ28-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಜಿ ಎಸ್, 1 ನೇ ಪ್ರತಿವಾದಿ ಪರ ವಕೀಲರಿಂದ**

ದಿಃ10-05-2009 ರ ಒಟ್ಟು ಕುಟುಂಬದ ಆಸ್ತಿಯ ಪಾಲುಪಟ್ಟಿಯನ್ನು ನಿಡಿಃ11 ಎಂದು, ಸಾಕ್ಷಿಯು ನಿಡಿಃ11 ರಲ್ಲಿ 1 ನೇ ವಾದಿಯ, 2 ನೇ ವಾದಿಯ ಮತ್ತು ತನ್ನ ಗಂಡನಾದ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಗಳನ್ನು ಕ್ರಮವಾಗಿ ನಿಡಿಃ11(ಎ), ನಿಡಿಃ11(ಬಿ) ಮತ್ತು ನಿಡಿಃ11(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಡಿಃ11 ರಲ್ಲಿ ಬಿಕಲ್ಲಂದಾರರಾದ ಎಂ ಎಸ್ ಸತ್ಯನಾರಾಯಣರಾವ್ ರವರ ಸಹಿಯನು ನೋಡಿ ಗುರುತಿಸಿದ್ದು ಸಹಿಯನ್ನು ನಿಡಿಃ11(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಡಿಃ11 ರಲ್ಲಿ ಸಾಕ್ಷಿದಾರರಾದ ತಿಮ್ಮಯ್ಯ, ಕರಿಯಪ್ಪ, ರಂಗಸ್ವಾಮಿ ಮತ್ತು ಓಬಳೇಶರವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿಃ11(ಇ) ರಿಂದ ನಿಡಿಃ11(ಎಚ್) ಎಂದು ಗುರುತಿಸಲಾಯಿತು. ದಿಃ18-11-1997 ರ ಕುಟುಂಬದ ವಂಶ ಬಿಡುಗಡೆ ಹೊಂದುವ ಖುಲಾಸೆ ಪತ್ರವನ್ನು ನಿಡಿಃ12 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಡಿಃ12 ರಲ್ಲಿ ತನ್ನ ಗಂಡನ ಅಣ್ಣನಾದ ರಂಗಸ್ವಾಮಿಯ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಡಿಃ12(ಎ) ಎಂದು ಗುರುತಿಸಲಾಯಿತು.

ಆದ್ದರಿಂದ ಸದರಿ ದಾವೆಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.